# 'ಮಾನವ ಸೇವೆಯೇ ಮಾಧವ ಸೇವೆ'
# ರವೀಂದ್ರನಾಥ ಠಾಕೂರರ ಮಾನವತಾ ಸಿದ್ಧಾಂತ

ರಾಜೇಶ್ವರಿ ಕೃಷ್ಣ

**ನಿಸರ್ಗದಲ್ಲಿ ಸೌಂದರ್ಯವಾಗಿಯೂ ಮಾನವನಲ್ಲಿ ಪ್ರೇಮಸ್ವರೂಪನಾಗಿಯೂ ಭಗವಂತನು ಅಭಿವ್ಯಕ್ತನಾಗುತ್ತಾನೆ. ಮಾನವ ಸೇವೆಯ ಮೂಲಕ ಆ ಪ್ರೇಮಸ್ವರೂಪನನ್ನು ಆರಾಧಿಸಬೇಕು. ರವೀಂದ್ರನಾಥ ಠಾಕೂರರ ಈ ತತ್ತ್ವವನ್ನು ವಿಶದಪಡಿಸಿರುವ ಶ್ರೀಮತಿ ರಾಜೇಶ್ವರಿ ಕೃಷ್ಣ ಅವರು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಹಲವಾರು ಗ್ರಂಥಗಳನ್ನು ರಚಿಸಿರುವರು.**

ರವೀಂದ್ರನಾಥ ಠಾಕೂರರು (ಮೇ ೭,೧೮೬೧—ಆಗಸ್ಟ್ ೭, ೧೯೪೧) ಜಗತ್ತಿನ ಶ್ರೇಷ್ಠ ಸಾಹಿತಿಗಳು; ಸಾಹಿತ್ಯಕ್ಕಾಗಿ ಅತ್ಯುನ್ನತ ನೊಬೆಲ್ ಪುರಸ್ಕಾರ ಪಡೆದ ಏಕೈಕ ಭಾರತೀಯರು. ಜೊತೆಗೆ ತತ್ತ್ವಜ್ಞಾನಿಗಳೂ,ಉತ್ತಮ ಶಿಕ್ಷಣತಜ್ಞರೂ, ಕಲಾವಿದರೂ ಆಗಿದ್ದ ಠಾಕೂರರು ತಮ್ಮ ಮಾನವತಾ ಸಿದ್ಧಾಂತದ ಮೂಲಕ ಮನುಕುಲಕ್ಕೆ ವಿಶಿಷ್ಟ ಜೀವನ ದರ್ಶನದ ಬೆಳಕನ್ನು ನೀಡಿ ಯುಗ ಪುರುಷರೆನಿಸಿದರು.



ಕಲ್ಕತ್ತೆಯಲ್ಲಿ ಠಾಕೂರರ ಮನೆತನ ಸಂಪ್ರದಾಯಬದ್ಧ ಜೀವನ, ಸಂಗೀತ, ಸಾಹಿತ್ಯ ಮತ್ತು ಭಾರತೀಯ ವಿಚಾರ ಧಾರೆಗೆ ಹೆಸರು ಪಡೆದಿತ್ತು. ರವೀಂದ್ರರ ತಾತ ದ್ವಾರಕಾನಾಥ ಠಾಕೂರರು ರಾಜಾ ರಾಮ ಮೋಹನರಾಯ್‌ರ ಅನುಯಾಯಿಗಳಾಗಿದ್ದರು. ತಂದೆ ದೇವೇಂದ್ರನಾಥ ಠಾಕೂರರು ರಾಜಾ ರಾಮ ಮೋಹನ ರಾಯ್ ಸ್ಥಾಪಿಸಿದ್ದ ಬ್ರಹ್ಮ ಸಮಾಜದ ಮುಂದಾಳಾಗಿದ್ದರು. 'ಮಹರ್ಷಿ' ಎನಿಸಿದ್ದ ದೇವೇಂದ್ರನಾಥರು ಆಗಾಗ ಹಿಮಾಲಯಕ್ಕೆ ಹೋಗಿ ಬರುತ್ತಿದ್ದು, ತಮ್ಮ ಹೆಚ್ಚಿನ ಸಮಯವನ್ನು ಧ್ಯಾನ-ತಪಸ್ಸಿನಲ್ಲಿ ಕಳೆಯುತ್ತಿದ್ದರು. ಕುಟುಂಬದ ಯಜಮಾನರಾಗಿ, ಪ್ರಾರ್ಥನೆ-ಪ್ರವಚನಗಳೊಂದಿಗೆ ಮನೆಯಲ್ಲಿ ಧಾರ್ಮಿಕ ವಾತಾವರಣವನ್ನು ಪೋಷಿಸಿಕೊಂಡು ಬಂದಿದ್ದರು. ಎಲ್ಲರಿಗಿಂತ ಕಿರಿಯರಾಗಿದ್ದ ರವೀಂದ್ರರು ಹುಟ್ಟಿ ಬೆಳೆದದ್ದು ಇಂಥ ಪರಿಸರದಲ್ಲಿ.

## ಅನ್ವೇಷಣೆ

ರವೀಂದ್ರರಿಗೂ ಚಿಕ್ಕ ವಯಸ್ಸಿನಲ್ಲೇ ಈ ಧರ್ಮದಲ್ಲಿ ಶ್ರದ್ಧೆ ಬೆಳೆಯಿತು. ಪ್ರಾರ್ಥನೆಯ ಸಮಯದಲ್ಲಿ ಹಾಡುವುದಕ್ಕೆ ಅವರು ಆಗಲೆ ಭಕ್ತಿಗೀತೆಗಳನ್ನು ರಚಿಸುತ್ತಿದ್ದರು. ಆದರೆ ಅವರು ಬೆಳೆದು ದೊಡ್ಡವರಾದಂತೆ ಅವರ ವ್ಯಕ್ತಿತ್ವ ವಿಕಾಸಗೊಂಡಂತೆ, ವ್ಯವಸ್ಥಿತ ಧರ್ಮದಲ್ಲಿ ಅಂಗೀಕಾರ ಮನೋವೃತ್ತಿ ಸಾಧ್ಯವಾಗಲಿಲ್ಲ. ಸಾಮಾನ್ಯ ಜನರಿಗೆ ಸರಿ ಹೊಂದುವಂಥ ಆಚರಣೆಗಳಲ್ಲಿ ತೃಪ್ತಿ-ಸಮಾಧಾನ ಸಿಗಲಿಲ್ಲ. ಹೀಗಾಗಿ ಅವರು ತಮ್ಮ ಮನಸ್ಸಿಗೆ ಒಪ್ಪುವ ಧರ್ಮದ ಅನ್ವೇಷಣೆಗಾಗಿ ತಮ್ಮದೇ ಆದ ಸ್ವತಂತ್ರ ಹಾದಿಯಲ್ಲಿ ನಡೆಯ ತೊಡಗಿದರು. ಈ ಅನ್ವೇಷಣೆಯ ಕ್ರಿಯೆಯಲ್ಲಿ ಠಾಕೂರರು ತಮ್ಮ ಸ್ವಭಾವವನ್ನನುಸರಿಸಿ, ಬುದ್ಧಿಶಕ್ತಿಗಿಂತ ಭಾವವನ್ನೆ ಹೆಚ್ಚಾಗಿ ಅವಲಂಬಿಸಿದಂತೆ ಕಾಣುತ್ತದೆ. ಠಾಕೂರರು ಹುಟ್ಟು ಪ್ರತಿಭಾವಂತರು, ಸೃಜನಶೀಲ ಬರಹಗಾರರು. ಅವರೊಳಗಿದ್ದದ್ದು ಒಬ್ಬ ಕವಿ. ಹೀಗಾಗಿ ಆತ ಶೋಧಿಸುತ್ತಿದ್ದದ್ದು ಒಬ್ಬ ಕವಿಯ ಧರ್ಮವನ್ನು. ಇದರಿಂದಾಗಿ ಅವರ ಧರ್ಮದ ಹಾಗೂ ಕಾವ್ಯದ ಸ್ಫೂರ್ತಿ ಒಂದೇ ಆಯಿತು. ಅವರ ಧಾರ್ಮಿಕ ಅನುಭವ ಅವರ ಬರವಣಿಗೆಯಲ್ಲಿ ಅಭಿವ್ಯಕ್ತಿ ಪಡೆಯಿತು.

## 'ಜೀವನ ದೇವತಾ'

ಬಾಲ್ಯದಲ್ಲಿ ಠಾಕೂರರ ಸೂಕ್ಷ್ಮ ಮನಸ್ಸು ಸಹಜವಾಗಿಯೇ ನಿಸರ್ಗದ ಸೊಬಗಿನತ್ತ ವಾಲಿತ್ತು. ಪ್ರಕೃತಿಯ ಚೆಲುವನ್ನು ಬಣ್ಣಿಸಿ ಅವರು ಹಲವಾರು ಪದ್ಯಗಳನ್ನು ಬರೆದರು. ಅವರ ಚಿಂತನೆ ವಿಕಾಸಗೊಂಡಂತೆ, ನಿಸರ್ಗದ ಹಿಂದೆ ಸರ್ವಾಂತರ್ಯಾಮಿಯಾದ ತತ್ತ್ವವೊಂದು ಕೆಲಸ ಮಾಡುತ್ತಿದೆ ಎಂಬುದನ್ನು ಗ್ರಹಿಸಿದರು. ಈ ತೆರನಾದ ಆತ್ಮವಿಕಾಸವನ್ನು ಬಣ್ಣಿಸುತ್ತ ಅವರು ಒಂದು ಸಾಮ್ಯವನ್ನು ನೀಡುತ್ತಾರೆ—'ವೇದಋಷಿಗಳಿಗೆ ಪ್ರಕೃತಿಯ ಯಾವುದೋ ಶಕ್ತಿಯ ಅರಿವುಂಟಾದಾಗ, ಅಥವಾ ಪ್ರಕೃತಿಯ ಒಂದು ಸುಂದರ ವಿದ್ಯಮಾನವನ್ನು ಕಂಡಾಗ ಅವರು ಭಕ್ತಿಪರವಶರಾಗುತ್ತಿದ್ದರು. ಇದೆಲ್ಲ ದೈವಶಕ್ತಿಯ ಪ್ರತೀಕ ಎನ್ನುತ್ತಿದ್ದರು. ವೇದಗಳಲ್ಲಿನ ದೇವತೆಗಳ ಕಲ್ಪನೆ ಹುಟ್ಟಿದ್ದು ಹೀಗೆಯೆ. ಅವರಲ್ಲಿ ಒಬ್ಬ "ಅಗ್ನಿ" ಒಬ್ಬ "ಸೂರ್ಯ", ಇನ್ನೊಬ್ಬ "ವರುಣ".... ಪ್ರಾತಃಕಾಲದ ರಾಗರಂಜಿತ ಆಕಾಶ "ಉಷಾ" ಆದಳು.'

ಆದರೆ ಈ ಕಲ್ಪನೆಯಿಂದ ಠಾಕೂರರಿಗೆ ಸಂಪೂರ್ಣ ಸಮಾಧಾನ

ಸಿಗಲಿಲ್ಲ. ಅವರು ಸರ್ವಾಂತರ್ಯಾಮಿಯಾದ ಈ ಶಕ್ತಿಯೊಂದಿಗೆ ಒಂದು ಭಾವನಾತ್ಮಕ ಸಂಬಂಧಕ್ಕಾಗಿ ಹಂಬಲಿಸಿದರು. ಆದರೆ ನಿಸರ್ಗವನ್ನೆಲ್ಲ ವ್ಯಾಪಿಸಿರುವ ಅನಂತ ಚೇತನ ಒಂದು ವ್ಯಕ್ತಿ ರಹಿತ ತತ್ತ್ವವಾದ್ದರಿಂದ ಇಂತಹ 'ಅಂತಃಕರಣದ ಸಂಬಂಧ' ಸಾಧ್ಯವಿರಲಿಲ್ಲ. ಠಾಕೂರರು ಈ ಸಮಸ್ಯೆಗೆ ತಮ್ಮದೇ ಆದ ಪರಿಹಾರವನ್ನು ಕಂಡುಕೊಂಡರು.

ನನ್ನ ಕಣ್ಣೊಳು ನಿನ್ನ ವಿಶ್ವವ
ಕಂಡುಕೊಳ್ಳುತ ನಲಿವೆಯಾ?
ನಿನ್ನ ಹಾಡನೆ ಕೇಳಿಕೊಳ್ಳಲು,
ಕವಿಯೆ, ಕಿವಿಯೊಳು ಸುಳಿವೆಯಾ?
ನನ್ನ ಚಿತ್ತದಿ ನಿನ್ನ ಸೃಷ್ಟಿಯೆ
ರಚಿಸುತಿದೆ ಈ ವಾಣಿಯ!
ನಿನ್ನ ಪ್ರೀತಿಯ ಗೀತಿಯಿದರಲಿ ರಚಿಸುತಿದೆ,
ಪ್ರಭೊ, ಕಾಣೆಯಾ?
ಮಧುರ ಭಾವದಿ ನೋಡಿಕೊಳ್ಳಲು
ನಾನು ನಿನ್ನಯ ದರ್ಪಣಾ!
ಚೆದುರ, ನನ್ನಲಿ ಸೋತೆ ಮನವನು;
ನನಗೆ ನಿನ್ನಯ ಅರ್ಪಣಾ!

*ಗೀತಾಂಜಲಿ* ಯಿಂದ
ಅನುವಾದ
ಪ್ರಹ್ಲಾದ ನರೇಗಲ್ಲ

ಅವರು ಅರ್ಥ ಮಾಡಿಕೊಂಡಂತೆ, ವಿಶ್ವರಕ್ಷಕನಾದ ಭಗವಂತ ಎರಡು ವಿಭಿನ್ನ ಭೂಮಿಕೆಗಳಲ್ಲಿ ತನ್ನ ಪಾತ್ರವನ್ನು ನಿರ್ವಹಿಸುತ್ತಿರುತ್ತಾನೆ. ನಿಸರ್ಗದಲ್ಲಿ ನಮಗೆ ಕಾಣುವ ಚೆಲುವು ಇದರ ಒಂದು ಸ್ವರೂಪ. ಇಲ್ಲಿ ಪರಮಾತ್ಮ ಒಂದು ವ್ಯಕ್ತಿತ್ವ ರಹಿತ ಶಕ್ತಿ. ಇನ್ನೊಂದು ಸ್ತರದಲ್ಲಿ ಪರಮಾತ್ಮ ವ್ಯಕ್ತಿತ್ವವನ್ನು ಧರಿಸಿ, ಪ್ರತಿಯೊಬ್ಬ ಮಾನವನಲ್ಲಿ ನೆಲೆಸಿ, ಅವನ ಪ್ರೇಮವನ್ನು ಪಡೆಯಬಯಸುತ್ತಾನೆ. ಶಕ್ತಿಯ ಆಗರವಾದ ಸೂರ್ಯ ಬೃಹದಾಕಾಶದಲ್ಲೆಲ್ಲ ತನ್ನ ಕಿರಣಗಳನ್ನು ಪಸರಿಸುತ್ತಾನೆ, ಹಾಗೆಯೇ ಒಂದು ಪುಟ್ಟ ಹಿಮಮಣಿಯಲ್ಲೂ ಪ್ರತಿಬಿಂಬಿಸುತ್ತಾನೆ. ಠಾಕೂರರು ತಾವು ಕಂಡುಕೊಂಡ ಈ ವೈಯಕ್ತಿಕ ಪರಮಾತ್ಮನಿಗೆ 'ಜೀವನ ದೇವತಾ' ಎಂದು ಹೆಸರಿಟ್ಟರು. ಇದು ಕವಿಯ ಜೀವನವನ್ನು ರೂಪಿಸಿ, ಆತನ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸಬಲ್ಲ ಒಂದು ಅಂತಃಶಕ್ತಿ ಆಗಿತ್ತು. ಠಾಕೂರರ ಬರವಣಿಗೆಗಳಲ್ಲಿ, ಭಕ್ತಿಗೀತೆಗಳಲ್ಲಿ ಈ ವಸ್ತುವಿನ ಪ್ರಭಾವವನ್ನು ನಾವು ಕಾಣಬಹುದು. ಅವರ ಮೇರುಕೃತಿ ಎನ್ನಬಹುದಾದ 'ಗೀತಾಂಜಲಿ'ಯ ಕವನಗಳಿಗೆ ಮೂಲ ಪ್ರೇರಣೆಯ ವಸ್ತು, ಅವರ ಈ 'ಪ್ರಭು ಪ್ರೀತಿ'.

## ಮಾನವ ಸೇವೆ

ಆದರೆ ಠಾಕೂರರು ಕಲ್ಪಿಸಿಕೊಂಡ ಈ ಭಾವನಾತ್ಮಕ ಸಂಬಂಧಕ್ಕೂ ಮಿತಿಗಳಿದ್ದುವು. ಸಾಮಾನ್ಯವಾಗಿ ನಮಗೆ ಯಾರ ಬಗ್ಗೆಯಾದರೂ ಅಪಾರ ಪ್ರೀತಿ-ಗೌರವಗಳಿದ್ದರೆ, ಅವರಿಗೆ ನಮ್ಮ ಸೇವೆಯನ್ನು ಸಲ್ಲಿಸಿ ಅದನ್ನು ತೋರಿಸಬಯಸುತ್ತೇವೆ. ಹೃದಯದಲ್ಲಿರುವ ಪೂಜ್ಯಭಾವ ವೈಯಕ್ತಿಕ ಸೇವೆಯ ವಿವಿಧ ಕಾರ್ಯಗಳಲ್ಲಿ ಅಭಿವ್ಯಕ್ತಿ ಪಡೆಯಲು ಹಾತೊರೆಯುತ್ತದೆ. ಆದರೆ ರವೀಂದ್ರರು ಕಲ್ಪಿಸಿಕೊಂಡ, ಅಪಾರವಾಗಿ ಪ್ರೀತಿಸಿದ ಪರಮಾತ್ಮನಿಗೆ ನಿರ್ದಿಷ್ಟ ಭೌತಿಕ ಸ್ವರೂಪ ಇರಲಿಲ್ಲ. ಹೀಗಾಗಿ, ಇಂಥ ಸೇವೆಗೂ ಅವಕಾಶ ಇರಲಿಲ್ಲ. ತಮ್ಮ ಆತ್ಮ ಸಾಕ್ಷಾತ್ಕಾರದ ಪಯಣದಲ್ಲಿ ಕೊನೆಯ ಹಂತಕ್ಕೆ ಬಂದಿದ್ದ ಠಾಕೂರರು ಈ ಸಂದಿಗ್ಧಕ್ಕೂ ಒಂದು ಪರಿಹಾರ ಕಂಡುಕೊಂಡರು. ಒಂದು ಭೂಮಿಕೆಯಲ್ಲಿ ಪರಮಾತ್ಮ ಪ್ರತಿಯೊಬ್ಬ ಮನುಷ್ಯನಲ್ಲೂ ನೆಲೆಸಿರುವುದರಿಂದ ಅವನ ಸೇವೆಗೆ ಅತ್ಯುತ್ತಮ ಮಾರ್ಗ ಸಹ ಮಾನವರ ಸೇವೆ ಎಂಬ ದೃಢ ನಿರ್ಧಾರಕ್ಕೆ ಬಂದರು. ಭಗವಂತನ ಸೇವಕನಾದವನು ಜನ ಸೇವಕನಾಗಬೇಕು. ಏಕೆಂದರೆ ಮನುಷ್ಯರು—ಅದರಲ್ಲೂ ದೀನ-ದಲಿತರು, ದುಃಖಿತರು, ಶೋಷಿತರು—ನಿಜವಾದ ಅರ್ಥದಲ್ಲಿ ಭಗವಂತನ ಪ್ರತಿನಿಧಿಗಳು. ಇಂತಹವರಿಗೆ ಅಗತ್ಯವಾದ ಸೇವೆಯನ್ನು ಸಲ್ಲಿಸುವ ಮೂಲಕ ನಾವು ಪರಮಾತ್ಮನನ್ನು ಪರಿಪೂರ್ಣ ಸ್ವರೂಪದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಸಾರ್ವತ್ರಿಕ ಕ್ಷೇಮಾಭ್ಯುದಯಕ್ಕೆ ನೆರವಾಗುವ ಕೆಲಸಗಳನ್ನು ಕೈಗೊಳ್ಳುವುದೇ ನಿಜವಾದ ಧರ್ಮ, ಶ್ರೇಷ್ಠವಾದ ಆಚರಣೆ.

ಹೀಗೆ ಠಾಕೂರರ ಅನ್ವೇಷಣೆ ಒಂದು ವಿಶಿಷ್ಟ ಸ್ವರೂಪದ ಮಾನವತಾವಾದದಲ್ಲಿ ಮುಕ್ತಾಯವಾಯಿತು. ಭಾರತೀಯ ಚಿಂತನೆಯಲ್ಲಿ ಬಹಳ ಮುಖ್ಯವೆನಿಸಿರುವ ಜ್ಞಾನ, ಭಕ್ತಿ ಮತ್ತು ಕರ್ಮ ಮಾರ್ಗಗಳು ಈ ಮಾನವತಾವಾದವನ್ನು ರೂಪಿಸುವುದರಲ್ಲಿ ಗಣನೀಯ ಪ್ರಭಾವ ಬೀರಿದವು. ಅವರ ಕಾವ್ಯ, ಬರವಣಿಗೆ ಹಾಗೂ ಉಪದೇಶ ಭಾಷಣಗಳಿಗೆ ಈ ವಿಚಾರಧಾರೆಯೇ ವಸ್ತುವಾಯಿತು. ೧೯೩೦ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅವರು ಇದೇ ವಿಷಯದ ಬಗ್ಗೆ ನೀಡಿದ ಉಪನ್ಯಾಸಗಳನ್ನು *The Religion of Man* ಎಂಬ ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಇದೇ ವಿಚಾರಧಾರೆಯೇ ಠಾಕೂರರು ಶಾಂತಿನಿಕೇತನ (ತಪೋವನ ಶಾಲೆ), ವಿಶ್ವಭಾರತಿ (ವಿಶ್ವ ಶಾಂತಿ, ವಿಶ್ವ ಬಾಂಧವ್ಯದ ಉದ್ದೇಶ ಹೊಂದಿದ್ದ ಒಂದು ವಿಶಿಷ್ಟ ವಿಶ್ವವಿದ್ಯಾನಿಲಯ) ಹಾಗೂ ಶ್ರೀನಿಕೇತನ (ಗ್ರಾಮೀಣ ಅಭಿವೃದ್ಧಿ ಸಂಸ್ಥೆ)ದಂಥ ಸಂಸ್ಥೆಗಳನ್ನು ತೆರೆಯಲು ಮುಖ್ಯ ಪ್ರೇರಣೆಯಾಯಿತು.

## ವಿವಿಧ ಮಾರ್ಗಗಳು

ರವೀಂದ್ರನಾಥ ಠಾಕೂರರ ಮಾನವತಾ ಸಿದ್ಧಾಂತದಲ್ಲಿ

ವಿಧಿವತ್ತಾದ ಪ್ರಾರ್ಥನೆ ಹಾಗೂ ಇನ್ನಿತರ ಆಚರಣೆಗಳ ಸ್ಥಾನವನ್ನು ಮಾನವ ಕಲ್ಯಾಣದ ಕೆಲಸಗಳು ಪಡೆಯುತ್ತವೆ. ಪ್ರಭುವನ್ನು ಮುಖ್ಯವಾಗಿ ಕಾಣಬೇಕಾಗಿರುವುದು ಜನಸಾಮಾನ್ಯರಲ್ಲಿ, ಅವರ ಸೇವೆಯಲ್ಲಿ—

**'ಕಾಣು ಬಾ ಇಲ್ಲಿ, ಭಗವಂತನನು—**
**ದುಡಿದು, ಬೆವರಿಳಿದು ಬಸವಳಿಯುತ್ತಲಿರುವ**
**ಈತನ ಬೆನ್ನಾಗು ಬಾ ಇಲ್ಲಿ'** ( *ಗೀತಾಂಜಲಿ* )

ದಕ್ಷಿಣೇಶ್ವರದ ಮಹಾ ಸಂತರೆನಿಸಿದ ಶ್ರೀರಾಮಕೃಷ್ಣ ಪರಮಹಂಸರು ಹೇಳಿದಂತೆ ಭಗವದ್ಭಕ್ತಿ ಎಂಬುದು ಮನುಷ್ಯನಲ್ಲಿ ಒಂದು ಮೂಲಭೂತ ಪ್ರೇರಣೆ. ಇದರ ಅಭಿವ್ಯಕ್ತಿಗೆ ಅವರವರ ತಿಳಿವಳಿಕೆ, ಜ್ಞಾನ ಹಾಗೂ ಮನೋಧರ್ಮಗಳಿಗೆ ಅನುಗುಣವಾಗಿ ಸಾಧುವೆನಿಸಿದ ಯಾವ ಮಾರ್ಗವನ್ನಾದರೂ ಆರಿಸಿಕೊಳ್ಳುವ ಸ್ವಾತಂತ್ರ್ಯ ಮನುಷ್ಯನಿಗಿರಬೇಕು. ಶ್ರೀರಾಮಕೃಷ್ಣರು ಒಂದು ಸಾಮ್ಯವನ್ನು ನೀಡಿ ಈ ಸಹಿಷ್ಣುತಾ ಭಾವನೆಯನ್ನು ಸಮರ್ಥಿಸುತ್ತಾರೆ. ನೀರಡಿಕೆಯಾದಾಗ ಅದನ್ನು ತಣಿಸಲು ನೀರನ್ನು ಅರಸುವುದು ಮುಖ್ಯ ಗುರಿಯಾಗಿರುತ್ತದೆಯೇ ಹೊರತು ಆ ನೀರು ನದಿ, ಬಾವಿ, ಕೆರೆ ಅಥವಾ ಇನ್ನೆಲ್ಲಿಂದ ಬಂತು ಎಂಬುದು ಮುಖ್ಯವಾಗಿರುವುದಿಲ್ಲ. ಹಾಗೆಯೇ ಭಕ್ತಿಪ್ರೇರಣೆಯನ್ನು ತಣಿಸಲು ಭಕ್ತಿ ಎಂಬ ಗುರಿ ಮುಖ್ಯವೇ ಹೊರತು ಮಾರ್ಗವಲ್ಲ—ಅವರವರ ಉದ್ದೇಶಕ್ಕೆ ಹೊಂದಿಕೊಳ್ಳುವಂಥ ವಿವಿಧ ಮಾರ್ಗಗಳಿರಬಹುದು.

## ಒಂದೇ ತತ್ತ್ವ

ಠಾಕೂರರ ಮಾನವತಾ ಸಿದ್ಧಾಂತದ ಸಾಮ್ಯವನ್ನು ನಾವು ಬೇರೆ ಕಡೆಗಳಲ್ಲೂ ಕಾಣಬಹುದು. ಪ್ರಾಯಶಃ ಏಸುಕ್ರಿಸ್ತನು ಹೇಳಿದನೆನ್ನುವ ಈ ಮಾತುಗಳು ಇದನ್ನೇ ಪ್ರತಿಧ್ವನಿಸುತ್ತವೆ—**'ಬಡವರೇ ಧನ್ಯರು, ಏಕೆಂದರೆ ಬರಲಿರುವ ರಾಜ್ಯವು ಅವರದ್ದು.' 'ಮಾನವ ಸೇವೆಯೇ ಮಾಧವ ಸೇವೆ'** ಎಂಬ ಈ ತತ್ತ್ವವನ್ನು ನಮ್ಮ ಪ್ರಾಚೀನ ಸಾಹಿತ್ಯದಲ್ಲೂ, ಧರ್ಮಾಚಾರಣೆಗಳಲ್ಲೂ ನಾವು ಗುರುತಿಸಬಹುದು. **'ನರ ನಾರಾಯಣ' 'ದರಿದ್ರ ನಾರಾಯಣ'** ಹುಟ್ಟಿಕೊಂಡಿದ್ದು ಈ ಸಿದ್ಧಾಂತದಿಂದಲೇ. ಲೋಕದ ಜನವೆಲ್ಲವೂ ಒಂದೇ ಕುಟುಂಬದವರು ಎಂಬ ಭಾವನೆಯನ್ನು ನಮ್ಮ ಉಪನಿಷತ್ತುಗಳು ಸಾರುತ್ತವೆ. ಮನುಸಂಹಿತೆಯು ಗೃಹಸ್ಥನಿಗೆ ವಿಧಿಸುವ ಬೇರೆ ಬೇರೆ ಧಾರ್ಮಿಕ ಆಚರಣೆಗಳಲ್ಲಿ ಮಾನವ ಸೇವೆಯೂ ಸೇರಿದೆ. 'ಹಿತೋಪದೇಶ'ದ ಒಂದು ದ್ವಿಪದಿ ಹೀಗಿದೆ—

**ದರಿದ್ರಾನ್ ಭಜ ಕೌಂತೇಯ ಮಾ ಯಚ್ಛೇಶ್ವರೇ ಧನಮ್ |**
**ರೋಗಿಣಃ ಪಥ್ಯಮೌಷಧಂ ನೀರುಜಸ್ಯ ಕಿಮೌಷಧೈಃ ||**

**'ಎಲೈ ಕುಂತೀಪುತ್ರನೇ, ಬಡವರ ಸೇವೆ ಮಾಡು, ದೇವರಿಗೆ ಧನವನ್ನರ್ಪಿಸುವುದು ಬೇಡ. ಔಷಧಿ ಕೊಡುವುದು ರೋಗಿಗೆ; ಆರೋಗ್ಯವಂತನಿಗೆ ಅದರಿಂದ ಫಲವೇನು?'**

ಆಧುನಿಕ ಕಾಲದ ಮಾನವತಾ ಸಿದ್ಧಾಂತದ ಚರಿತ್ರೆಯಲ್ಲಿ ಸ್ವಾಮಿ ವಿವೇಕಾನಂದರು ವಿಶಿಷ್ಟಸ್ಥಾನ ಪಡೆದಿದ್ದಾರೆ. ಠಾಕೂರರು ಮತ್ತು ವಿವೇಕಾನಂದರು ಸರಿಸುಮಾರು ಒಂದೇ ಸಮಯದಲ್ಲಿ ಕಲ್ಕತ್ತೆಯಲ್ಲಿ ಜನಿಸಿದರು. ಸಮಕಾಲೀನರಾಗಿದ್ದ ಇಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅಪಾರ ಖ್ಯಾತಿಗಳಿಸಿ, ನಮ್ಮ ನಾಡಿಗೆ ಕೀರ್ತಿ ತಂದರು. ಆಧ್ಯಾತ್ಮಿಕವಾಗಿ ವಿಭಿನ್ನ ದೃಷ್ಟಿಕೋನವುಳ್ಳವರಾಗಿದ್ದರೂ ಇಬ್ಬರೂ ಸಹಮಾನವರ ಭಾವನಾತ್ಮಕತೆಯಿಂದ ಸ್ಫೂರ್ತಿಪಡೆದು, ಮನುಷ್ಯಸೇವೆಯೇ ಭಗವಂತನಿಗೆ ನೇರವಾಗಿ ಸಲ್ಲುವ ಸೇವೆ ಎಂದು ಸಾರಿದರು.

ಕಡೆಯದಾಗಿ ಠಾಕೂರರ ಮಾನವತಾ ಸಿದ್ಧಾಂತವು ನಿಜವಾದ ಭಗವದ್ಭಕ್ತಿಯಿಂದ ಸ್ಫೂರ್ತಿ ಪಡೆದಿದ್ದು, ಇದರಿಂದಾಗಿ ಹಲವಾರು ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರ ಮಾನವತಾವಾದಕ್ಕಿಂತ ಹೆಚ್ಚು ಪರಿಣಾಮಕಾರಿ ಎನಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಠಾಕೂರರು ರೂಪಿಸಿದ ಈ ಹೊಸ ಮಾರ್ಗ ಅವರ ಚಿಂತನೆಯ ನಾವೀನ್ಯ ಹಾಗೂ ಅದರ ಹಿಂದಿರುವ ಉನ್ನತ ಆದರ್ಶ—ಇವುಗಳಿಂದಾಗಿ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ಹೊಸ ಸಹಸ್ರಮಾನದಲ್ಲಿ ಠಾಕೂರರ ಈ ಮನು ಕುಲದ ಕರೆ ನಮ್ಮೆಲ್ಲರನ್ನೂ ಚಿಂತನೆಗೆ ಹಚ್ಚಬೇಕಾಗಿದೆ.

## ಕರ್ಮಯೋಗ

ಎಲ್ಲಿ ನೇಗಿಲ ಮಗನು ಬಿರುನೆಲ ಚೆಲ್ಲಿ
ಹರಗುತ ದುಡಿವನೋ
ಕಲ್ಲು ಮಗ ಹನ್ನೆರಡು ತಿಂಗಳು ಎಲ್ಲಿ
ಬಿರುಗಲ್ಲೊಡೆವನೋ
ಆತ ತೆರಳಿಹನಲ್ಲಿ ಹುಡಿಯಲಿ—
ಬಿಸಿಲು ಮಳೆಗಳ ಮಧ್ಯದಿ
ಏತಕೀ ಶುಚಿವಸನ! ತೆಗೆದೊಗೆ!
ದುಡಿಯೊ ಅವನೊಲು ಸದ್ಯದಿ!

ಇಷ್ಟು ಹಲುಬುವ ಮುಕ್ತಿಯುಂಟೇ?
ಎಲ್ಲಿ ಪಡೆವೆಯೊ ಮುಕ್ತಿಯ?
ಸೃಷ್ಟಿಬದ್ಧನು ಪ್ರಭುವು ಇಟ್ಟಿಹ—
ನೆಲ್ಲರೊಳು ಅನುರಕ್ತಿಯ
ತೊರೆಯ ಧ್ಯಾನವ- ಪುಷ್ಪ ಧೂಪವ!
ಧೂಳಿ ವಸ್ತ್ರಕೆ ಸಿಡಿಯಲಿ
ಬೆರೆತು ಅವನಲಿ ಕರ್ಮಯೋಗದಿ
ಬಾಳಸಾಧನೆ ನಡೆಯಲಿ

*ಗೀತಾಂಜಲಿ* ಯಿಂದ
*ಅನುವಾದ*
ಪ್ರಹ್ಲಾದ ನರೇಗಲ್ಲ